# ಸೋಮೇಶ್ವರ ದೇವಾಲಯದ ನವನಾಥರ ಕೆತ್ತನೆ

- ವೈಶಾಲಿ. ಎ.ವಿ, ಬೆಂಗಳೂರು

*ದೇಗುಲಗಳ ಶಿಲ್ಪವು ನಮ್ಮ ಸಂಸ್ಕೃತಿ ಹಾಗೂ ಇತಿಹಾಸ ಪರಂಪರೆಯ ಚಿತ್ರಣ ಮಾತ್ರವಲ್ಲ, ದೈವತ್ವವನ್ನು ಜಗತ್ತಿಗೆ ತೋರಿಸುವ ಒಂದು ಅಂಶ. ಇಂತಹ ಒಂದು ಅದ್ಭುತ ಶಿಲ್ಪಕಲೆಯು ಯಾವಾಗಲೂ ನಿರತವಾಗಿರುವ ನಮ್ಮ ಬೆಂಗಳೂರಿನಲ್ಲಿ ಐತಿಹಾಸಿಕ ಸೊಬಗನ್ನು ಕಂಡು ಆನಂದಿಸಬಹುದಾದ ಒಂದು ಸ್ಥಳವೇ ಹಲಸೂರಿನ ಸೋಮೇಶ್ವರ ದೇಗುಲ.*

*ಈ ದೇಗುಲವು ದ್ರಾವಿಡ ಶೈಲಿಯ ದೇಗುಲವಾಗಿದ್ದು, ವಿಜಯನಗರ ಶೈಲಿಯ ವಾಸ್ತುಶಿಲ್ಪವನ್ನು ಒಳಗೊಂಡಿರುವ ಪುರಾತನ ಶಿವನ ದೇಗುಲವಾಗಿದೆ. ಇದನ್ನು 10ನೇ ಶತಮಾನಕ್ಕೂ ಹಳೆಯ ದೇಗುಲವೆಂದು, ನಂತರ ಹಿರಿಯ ಕೆಂಪೇಗೌಡ II ರಿಂದ ಹಾಗೂ ಹಲವು ಬಾರಿ ಹಲವು ಕಾಲದ ರಾಜರಿಂದ ಪುನರ್ ನಿರ್ಮಾಣ ಮಾಡಿರುವುದಾಗಿ, ಹಲವು ಮಾಹಿತಿಗಳು ದೊರಕಿವೆ.*

*ದೇಗುಲದ ಮುಂಬದಿಯಲ್ಲಿ ದ್ವಾರಗೋಪುರ ಹಾಗೂ ಬ್ರಹ್ಮಸ್ತಂಭ, ಮುಖಮಂಟಪ , ಅರ್ಧಮಂಟಪ, ನವರಂಗ, ಅಂತರಾಳ, ಪ್ರದಕ್ಷಿಣಾ ಪಥ, ಚೌಕಕಾರದ ಗರ್ಭಗುಡಿಯ ಎದುರು ನಂದಿ ಧ್ವಜಸ್ತಂಭವನ್ನು ಕಾಣಬಹುದಾಗಿದೆ.*

*ಈ ದೇಗುಲದಲ್ಲಿ ಹಲವಾರು ಶಿಲ್ಪಕಲೆ ಹಾಗೂ ಶಿಲ್ಪಾಲಂಕೃತ ಕಂಬಗಳು, ಸಿಂಹ, ಆನೆ,ಕುದುರೆಯಂತಹ ಪ್ರಾಣಿಗಳ ತಲೆ ಹಾಗೂ ದೇಹಗಳ ಸಮಿಶ್ರಣವನ್ನು ಹೊಂದಿರುವ ವ್ಯಾಳಿ/ಯಾಳಿಗಳು, ದೇಗುಲದ ದ್ವಾರಗಳಲ್ಲಿ ರಕ್ಷಕ ಹಾಗೂ ಪಾಲಕರಾಗಿ ಇರುವ ಶಿಲ್ಪಗಳು,ರಾವಣ ಕೈಲಾಸಪರ್ವತವನ್ನು ಎತ್ತುತ್ತಿರುವ ಶಿಲ್ಪ, ಮಹಿಷಾಸುರ ಮರ್ದಿನಿ, ಶಿವನ ಆರಾಧಕರಾದ 63 ನಾಯನ್ಮಾರರು, ಯೋಗನರಸಿಂಹ, ಬೇಡರಕಣ್ಣಪ್ಪ , ನರ್ತಕಿಯರು, ಶಿವಗಣಗಳು ಮುಂತಾದವುಗಳನ್ನು ಕಾಣಬಹುದು. ವಿಶೇಷವಾಗಿ ಗಿರಿಜಾ ಕಲ್ಯಾಣ ಹಾಗೂ ಎಲ್ಲಿಯೂ ಒಟ್ಟಿಗೆ ಕಾಣಲಾಗದ ನವನಾಥರ ಕೆತ್ತನೆಗಳನ್ನು ಇಲ್ಲಿ ಕಾಣಬಹುದಾಗಿದೆ.*

COPYRIGHT PROTECTED

***ನವನಾಥರ ಪರಿಚಯ*** **:**

***ನವನಾಥ ಕಥಾಸಾರದ ಪ್ರಕಾರ ದ್ವಾಪರಯುಗದ ಅಂತ್ಯ ,ಕಲಿಯುಗದ ಆರಂಭದ ಸಮಯದಲ್ಲಿ ಭೂಲೋಕದಲ್ಲಿ ವೈದಿಕಧರ್ಮವನ್ನು ನೆಲೆನಿಲ್ಲಿಸುವ ಹಾಗೂ ಪರಿಸ್ಥಿತಿಯನ್ನು ಬದಲಾಯಿಸುವ ಸಲುವಾಗಿ ನಾರಾಯಣನು ದ್ವಾರಕೆಯಲ್ಲಿ ಇದ್ದ. ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ತಿಪ್ಪಲಾಯನ, ಐರಹೋತ್ರ, ಚಮನ, ದ್ರುಮಿಲ ಮತ್ತು ಕರಭಾಜನರೆಂಬ ನವನಾರಾಯಣರನ್ನು ಕರೆದು ಭೂಲೋಕದ ಸ್ಥಿತಿಯನ್ನು ಬದಲಾಯಿಸುವುದಕ್ಕಾಗಿ ನವನಾಥರಾಗಿ ಜನ್ಮ ತಾಳಲು ಆಜ್ಞೆಮಾಡುತ್ತಾನೆ. ಹೀಗೆ ಭಕ್ತಿ ಹಾಗೂ ಜ್ಞಾನಮಾರ್ಗಕ್ಕೆ ಪ್ರಚೋದನೆ ನೀಡುತ್ತಾ ತಪಸ್ಸಿನ ದಾರಿ ತೋರಿಸುವ ಸಲುವಾಗಿ ಅವತರಿಸಿದವರೇ ನವನಾಥರು.***

***ನವನಾಥರೆಂದರೆ ಒಂಬತ್ತು ಹಾಗೂ ಹೊಸದು ಎಂಬ ಅರ್ಥವನ್ನು ಕಲ್ಪಿಸುತ್ತದ. ನವನಾಥರು ಶಿವ ಹಾಗೂ ಹರಿಯ ಸಂಯೋಜನೆಯ ಅವತಾರಗಳಾಗಿದ್ದು, ಇವರಲ್ಲಿ ಹರಿ-ಹರರ ಶಕ್ತಿ ಹಾಗೂ ಗುಣಗಳನ್ನು ಕಾಣಬಹುದು. ಇವರು ಸಾಮಾನ್ಯರಂತೆ ಯೋನಿಜನನವಿಲ್ಲದವರು, ಬ್ರಹ್ಮಚಾರಿಗಳು, ಲೌಕಿಕ ಜೀವನದಿಂದ ಹೊರಗುಳಿದವರು, ಹಠಯೋಗದಿಂದಲೇ ಸಿದ್ಧಿಯನ್ನು ಪಡೆದವರು, ವೈದಿಕ ಗುರು ದತ್ತಾತ್ರೇಯರ ವಂಶಾವಳಿಯವರು ಎಂಬುದಾಗಿ ನವನಾಥ ಕಥಾಸಾರದಿಂದ ತಿಳಿದು ಬಂದಿದೆ.***

***1. ಮತ್ಸ್ಯೇಂದ್ರನಾಥ – ಕವಿ ನಾರಾಯಣ***

***2. ಗೋರಕ್ಷನಾಥ – ಹರಿ ನಾರಾಯಣ***

***3. ಜಾಲಂದರನಾಥ – ಅಂತರಿಕ್ಷ ನಾರಾಯಣ***

***4. ಕಾನಿಫನಾಥ – ಪ್ರಬುದ್ಧನಾರಾಯಣ***

***5. ಗಹನೀನಾಥ – ಕರಭಾಜನ ನಾರಾಯಣ***

***6. ನಾಗನಾಥ – ಐರಹೋತ್ರ ನಾರಾಯಣ***

***7. ಚರ್ಪಟಿನಾಥ – ತಿಪ್ಪಲಾಯನ ನಾರಾಯಣ***

***8. ಭರ್ತರಿನಾಥ – ದ್ರುಮಿಲ ನಾರಾಯಣ***

***9. ರೇವಣನಾಥ – ಚಮಸ ನಾರಾಯಣ***

COPYRIGHT PROTECTED

***ಶಿವನ ದೇವಾಲಯಗಳಲ್ಲಿ ನವನಾಥರ ಶಿಲ್ಪಗಳನ್ನು ಕಾಣಬಹುದಾಗಿದೆ.***


***ಮತ್ಸ್ಯೇಂದ್ರನಾಥ ಹಾಗೂ ಅವರ ಶಿಷ್ಯರಾದ ಗೋರಕ್ಷನಾಥ , ಉಳಿದ ನಾಥರ ಪ್ರತಿಕೃತಿಗಳನ್ನು ಹಲಸೂರಿನ ದೇವಾಲಯದ ಪ್ರಾಕಾರದ ಎಡಬದಿಯಲ್ಲಿ ವಿಶೇಷವಾಗಿ ಪ್ರತಿಮಾಶಾಸ್ತ್ರದ (iconography )ಪ್ರಕಾರ ಸಾಲಾಗಿ ಕೆತ್ತಿರುವುದನ್ನು ಕಾಣಬಹುದಾಗಿದೆ.***

***ಇಲ್ಲಿ ನಾಥರೂ ಕೆಲವೊಂದು ಆಸನದಲ್ಲಿ ಕುಳಿತಿರುವುದನ್ನು ಕಾಣಬಹುದಾಗಿದೆ. ಅವುಗಳಲ್ಲಿ- ಅರ್ಧಪರಿಯಂಕಾಸನ : ಈ ಆಸನವು1/3 ದೇಹದ ಭಾರವನ್ನು ಕಡಿಮೆ ಮಾಡುತ್ತದೆ ಹಾಗೂ ಮನಸನ್ನು ಏಕಾಗ್ರತೆಯಿಂದ ಇಡಲು ಸಹಾಯಮಾಡುವುದು.***

***ರಾಜಲೀಲಾಸನ : ರಾಜವೈಖರಿಯನ್ನು ತೋರಿಸುವ ಆಸನ.***

***ಅರ್ಧಮತ್ಸ್ಯೇಂದ್ರಾಸನ : ಹಠಯೋಗದಲ್ಲಿ ಕಾಣುವ ಆಸನ ಇದಾಗಿದ್ದು, ಮನಸನ್ನು ಶಾಂತವಾಗಿಸುತ್ತದೆ. ಆತಂಕ ,ಮಾನಸಿಕ ಖಿನ್ನತೆ,ಮನಸ್ಸಿನಮೇಲೆ ಇರುವ ಒತ್ತಡವನ್ನು ನಿವಾರಿಸುತ್ತದೆ.***

***ಈ ಆಸನಗಳು ನಿಖರವಾದ ಕಾರ್ಯಸಿದ್ಧಿಯನ್ನು ಪಡೆಯಲು ಅನುಕೂಲವಾಗಿವೆ ಎನ್ನಲಾಗುತ್ತದೆ.***



***1. ಮೀನನಾಥ/ ಮತ್ಸ್ಯೇಂದ್ರನಾಥ : ನಾಥನು ಮೀನಿನಿಂದ ಜನಿಸಿದನೆಂದು ಹಾಗೂ ಶಿವನಿಂದ ಹಠಯೋಗವನ್ನು ಕಲಿತು ಪೂರ್ಣ ಸಿದ್ಧಿಯನ್ನು ಸಾಧಿಸಿದರೆಂದು ನವನಾಥ ಕಥಾಸಾರದಲ್ಲಿ ತಿಳಿದುಬಂದಿದೆ. ಮೀನನಾಥರು ಮೀನಿನಮೇಲೆ ಅರ್ಧಮತ್ಸ್ಯೇಂದ್ರಾಸನದಲ್ಲಿ ಕುಳಿತಿರುವುದನ್ನು ಕಾಣಬಹುದು. ಬಲ ಅಂಗೈ ಮೀನಿನಮೇಲೆ, ಎಡಗೈ ಎಡಮಂಡಿಯಮೇಲೆ ಇರುವ ಹಾಗೆ ಇದೆ. ಹಾಗೂ ಎಡತೋಳಿನಲ್ಲಿ ತೋಳ್ಬಂದಿ ಜೊತೆ ಜೋಳಿಗೆ ಇರುವುದನ್ನು ನೋಡಬಹದು. ಪಕ್ಕದಲ್ಲಿ ತ್ರಿಶೂಲವೂ ಇರುವುದು .***



***2. ಗೋರಕ್ಷನಾಥ*** *: ಇವರು ಭಸ್ಮದಿಂದ ಜನಿಸಿದರೆಂದು ಪ್ರತೀತಿ ಇದೆ. ಇವರು ಶಿವನ ಅವತಾರದ ಪ್ರತಿರೂಪವೆಂದು ನಂಬಿಕೆಯಿದೆ. ಇಲ್ಲಿ ಹುಲಿಯು ವೈರಾಗ್ಯ ಹಾಗೂ ಹಠದ ಪ್ರತೀಕ ಎಂದು ನಂಬಲಾಗಿದೆ. ಇವರು ಹುಲಿಯ ಮೇಲೆ ಅರ್ಧಮತ್ಸ್ಯೇಂದ್ರಾಸನದಲ್ಲಿ ಕುಳಿತಿರುವುದನ್ನು ಕಾಣಬಹುದು , ಅವರ ತಲೆಯೂ ಕೆಳಕ್ಕೆ ಮುಖಮಾಡಿ ಬಲಮಂಡಿಯಮೇಲೆ ವಿಶ್ರಾಂತಿಯಲ್ಲಿದೆ. ಇವರು ಕರ್ಣಕುಂಡಲ ಹಾಗೂ ಮಣಿಕಟ್ಟಿನಲ್ಲಿ ಕಡಗ ಧರಿಸಿರುವುದನ್ನು ಗುರುತಿಸಬಹುದಾಗಿದೆ.*



***3.ಜಾಲಂಧರನಾಥ****: ಇವರು ಬೆಂಕಿಯಿಂದ ಜನಿಸಿದರೆಂದು ನವನಾಥ ಕಥಾಸಾರದಿಂದ ತಿಳಿದುಬಂದಿದೆ. ಇಲ್ಲಿ ಸಿಂಹವು ರಾಜಗಾಂಭೀರ್ಯದ ಸಂಕೇತವಾಗಿ ಹೋಲಿಸಲಾಗಿದೆ. ರಾಜಲೀಲಾಸನದಲ್ಲಿ ಸಿಂಹದ ಮೇಲೆ ಕುಳಿತಿರುವುದನ್ನು ಕಾಣಬಹುದು. ಬಲಗೈ ಬಲತೊಡೆಯ ಮೇಲೆ ಹಾಗೂ ಎಡಗೈ ಎಡಮಂಡಿಯ ಮೇಲೆ, ತಲೆಯು ಎಡತೋಳಿನ ಮೇಲೆ ವಿಶ್ರಾಂತಿಯಲ್ಲಿರುವ ಹಾಗೆ ಕಾಣುವುದು .*




***4. ಕಾನಿಫನಾಥ****: ಇವರು ಶಂಕರನ (ಶಿವ)ಇಚ್ಛೆಯಂತೆ ಗಜದ ಕಿವಿಯಿಂದ ಜನಿಸಿದರೆಂದು ನವನಾಥ ಕಥಾಸಾರವು ಹೇಳುತ್ತದೆ. ಇಲ್ಲಿ ಗಜಯಾಳಿಯು ಶಕ್ತಿ ಹಾಗೂ ಜ್ಞಾನವನ್ನು ಬಿಂಬಿಸುತ್ತದೆ. ನಾಥನು ಗಜಯಾಳಿಯಮೇಲೆ ಕುಳಿತಿರುವುದನ್ನು ಕಾಣಬಹುದಾಗಿದೆ. ಯಾಳಿಯು ಬಲಗಡೆ ಮುಖಮಾಡಿ ನಾಥನ ಮುಖವು ಎಡಕ್ಕೆ ಕೆಳಮುಖ ಮಾಡಿರುವ ಹಾಗೆ ಇರುವುದು ಹಾಗೂ ನಾಥನ ಬಲ ಕೈ ಬಹುಶಃ ಅಭಯಹಸ್ತ ಹಿಡಿದಿರುವ ಹಾಗೆ, ಎಡಗೈ ಇಳಿಬಿಟ್ಟಂತೆ ಇರುವುದನ್ನು ಕಾಣಬಹುದಾಗಿದೆ.*



***5.ಗಹನೀನಾಥ:*** *ವಿಷ್ಣು ಭೂಮಿಯನ್ನು ಕಾಪಾಡಲು ವರಾಹ ಅವತಾರ ತಾಳಿದಂತೆ, ಇವರು ಗೋರಕ್ಷನಾಥರ ಸಂಜೀವಿನಿ ಮಂತ್ರದಿಂದ ಮಣ್ಣಿನ ಪ್ರತಿಮೆಯಲ್ಲಿ ಜನಿಸಿದ ಕಾರಣ, ಇಲ್ಲಿ ವರಾಹವು ಅವರ ಸಂಕೇತ ಎಂಬುದು ನನ್ನ ಅನಿಸಿಕೆಯಾಗಿದೆ. ಇವರು ಅರ್ಧಮತ್ಸ್ಯೇಂದ್ರಾಸನದಲ್ಲಿ ಕುಳಿತಿರುವರು., ಬಲಗೈ ಬಲಮಂಡಿಯ ಮೇಲೆ ಇರುವುದು. ಎಡಗೈ ವರಾಹದ ಮೇಲೆ ಇರುವುದು; ಎರಡು ಮಣಿಕಟ್ಟಿನಲ್ಲಿ ಕಡಗ ತೊಡಿಸಿಕೊಂಡಿರುವುದನ್ನು ಕಾಣಬಹುದು.*


***6. ನಾಗನಾಥ/ ಐರಹೋತ್ರ*** *: ಇವರು ಹಾವಿನ ಮೊಟ್ಟೆಯಿಂದ ಜನಿಸಿರುವುದಾಗಿ ನವನಾಥ ಕಥಾಸಾರದಲ್ಲಿ ತಿಳಿದುಬಂದಿದೆ . ಇಲ್ಲಿ ಸರ್ಪ ಅವರ ಜನ್ಮವನ್ನು ಸೂಚಿಸುತ್ತದೆ . ಇವರು ರಾಜಲೀಲಾಸನದಲ್ಲಿ ಎಡಬದಿ ತಿರುಗಿರುವ ಸರ್ಪದಮೇಲೆ ಕುಳಿತಿರುವರು. ಇವರು ಜೋಳಿಗೆ ಧರಿಸಿರುವುದನ್ನು ಕಾಣಬಹುದು. ಇವರ ಎಡಗೈ ಎಡ ತೊಡೆಯ ಮೇಲೆ ಹಾಗೂ ಬಲಗೈ ಬಲಮಂಡಿಯಮೇಲೆ/ ಡೋಲದಲ್ಲಿ ವಿಶ್ರಾಂತಿಯಲ್ಲಿದೆ. ತೋಳ್ಬಂದಿ ಹಾಗೂ ಮಣಿಕಟ್ಟಿನಲ್ಲಿ ಕಡಗ/ಕಂಕಣ ಧರಿಸಿರುವರು. ಎದೆಗೆ ಪಟ್ಟಿಹಾಕಿರುವ ಹಾಗೆ ಗುರುತಿಸಬಹುದು .*





***7. ಚರ್ಪಟಿನಾಥ :*** *ಇವರು ಬ್ರಹ್ಮನ ವೀರ್ಯದಿಂದ ಭಾಗೀರಥಿ ನದಿಯ ದಡದಲ್ಲಿ ಜನಿಸಿದರೆಂದು ನವನಾಥ ಕಥಾಸಾರವು ತಿಳಿಸುತ್ತದೆ . ಇಲ್ಲಿ ನಾಥನು ಅರ್ಧಪರಿಯಂಕಾಸನಾದಲ್ಲಿ ಕೂರ್ಮದ ಮೇಲೆ ವಿಶ್ರಾಂತ ಸ್ಥಿತಿಯಲ್ಲಿ ಕುಳಿತಿರುವುದನ್ನು ಹಾಗೂ ಇಲ್ಲಿ ಕೂರ್ಮವು ಮನಸ್ಸಿನ ಸಮಸ್ಥಿತಿಯನ್ನು ತೋರಿಸುವ ಪ್ರತೀಕವಾಗಿದೆ. ಇವರ ತಲೆಯು ತನ್ನ ಬಲ ಅಂಗೈ ಮೇಲೆ ಇರುವುದು, ಬಲಗಾಲು*

*ಕೂರ್ಮದಮೇಲೆ, ಎಡಗೈ ಎಡಗಾಲಿನ ಮೇಲೆ ಹಾಗೂ ಅವರ ಕೇಶವು ಜಡೆಕಟ್ಟಿರುವುದೋ ಎಂಬಂತೆ ಭಾಸವಾಗುತ್ತದೆ. ಅವರು ಜನಿವಾರದ ಜೊತೆಗೆ ಕೊರಳ ಹಾರವನ್ನು ಧರಿಸಿರುವುದನ್ನು ಕಾಣಬಹುದು.*



*8. ಚೌರಂಗಿನಾಥ / ಭರ್ತರಿನಾಥ : ಜಿಂಕೆಯು ತನ್ನ ಮರಿಗಳೊಂದಿಗೆ ಇವರನ್ನು 7 ವರ್ಷಗಳವರೆಗೆ ಸಾಕಿರುವುದಾಗಿ ನವನಾಥ ಕಥಾಸಾರದಿಂದ ತಿಳಿದುಬಂದಿದೆ. ಇಲ್ಲಿ ಜಿಂಕೆಯೂ ಜ್ಞಾನ ಹಾಗೂ ಚಾತುರ್ಯದ ಸಂಕೇತವಾಗಿದೆ. ಇಲ್ಲಿ ಇವರು ಜಿಂಕೆಯಮೇಲೆ ಕುಳಿತು ಅದರ ಕೊಂಬನ್ನು ಬಲಗೈಯಲ್ಲಿ ಹಿಡಿದು ಹಾಗೂ ಬಾಯಿಯ ಬಳಿ ಎಡಗೈ ಹಿಡಿದಿರುವ ಹಾಗೆ ಕಾಣಬಹುದಾಗಿದೆ.*



*9. ರೇವನಾಥ / ರೇವಣನಾಥ : ಇವರು ಬ್ರಹ್ಮನ ವೀರ್ಯದಿಂದ ರೇವಾನದಿಯ ದಡದಲ್ಲಿ ಜನೀಸಿದರೆಂದು, ಗುರು ದತಾತ್ರೇಯರಿಂದ ಮಂತ್ರ ಶಕ್ತಿಯನ್ನು ಪಡೆದು ಜ್ಞಾನ ಹಾಗೂ ಸಿದ್ಧಿಯನ್ನು ಪಡೆದು ಜನರ ಕಷ್ಟಪರಿಹಾರ ಮಾಡಿದರೆಂದು ಪ್ರತೀತಿಯಿದೆ. ಇಲ್ಲಿ ವೃಶ್ಚಿಕವೂ ಜ್ಞಾನ ಮತ್ತು ನಿರ್ಭಯವನ್ನು ಸೂಚಿಸುತ್ತದೆ . ನಾಥನು ವೃಶ್ಚಿಕದ ಮೇಲೆ ಅರ್ಧಮತ್ಸ್ಯೇಂದ್ರಾಸನದಲ್ಲಿ ಕುಳಿತಿರುವನು. ಇವರ ಬಲಗೈಯನ್ನು ಬಾಯಿಯ ಬಳಿ ಹಿಡಿದಿರುವ ಹಾಗೆ, ಎಡಗೈ ಎಡತೊಡೆಯ ಮೇಲೆ, ತೋಳಿನಲ್ಲಿ ಜೋಳಿಗೆ ಹಿಡಿದಿರುವ ಹಾಗೆ ಕಾಣುತ್ತದೆ. ದೊಡ್ಡದಾದ ಕರ್ಣ ಕುಂಡಲಗಳು , ಕೊರಳ ಹಾರದ ಆಭರಣ, ಜನಿವಾರ ಹಾಗೂ ಎದೆಯ ಮೇಲೆ ಪದಕ ಹಾಗೂ ಪಕ್ಕದಲ್ಲಿ ತ್ರಿಶೂಲವು ಇರುವುದನ್ನು ಕಾಣಬಹುದು.*

***ಮೇಲಿನ ಎಲ್ಲಾ ನವನಾಥರ ಪರಿಚಯವು ನವನಾಥ ಕಥಾಸಾರದಿಂದ ಆಯ್ದ ಕೆಲವೊಂದು ಮುಖ್ಯ ವಿಷಯಗಳನ್ನು ಒದುಗರಿಗೆ ಸುಲಭವಾಗಿ ಅರ್ಥವಾಗಲೆಂದು ಬರೆಯಲ್ಪಟ್ಟ ಕಿರು ಪರಿಚಯ.***

***ಇವುಗಳಂತೆಯೇ ಪೌರಾಣಿಕ ಹಿನ್ನೆಲೆಯನ್ನು ಒಳಗೊಂಡ ಶಿಲ್ಪಚಾತುರ್ಯದ ಸೌಂದರ್ಯವು ದಿವ್ಯದೇಗುಲದ ತಾಣವೆನಿಸಿದ ನಮ್ಮ "ಬೆಂಗಳೂರಿನ ಸೋಮೇಶ್ವರ ದೇವಾಲಯದಲ್ಲಿ ಕಣ್ಮನಗಳನ್ನು ಸೆಳೆಯುತ್ತದೆ.***

*" ಮೂಲ ಆಕರ ನವನಾಥ ಕಥಾಸಾರ"*

*****

## *ಲೇಖಕಿಯ ಪರಿಚಯ*



*ವೈಶಾಲಿ ಅವರು, ಗುರು ಶ್ರೀಮತಿ. ಡಾ. ದ್ವರಿತಾ ವಿಶ್ವನಾಥರವರ 'ನಿರ್ಮಿತಿ'ಯಲ್ಲಿ 2010 ರಿಂದ ನೃತ್ಯ ಅಭ್ಯಾಸ ಮಾಡುತ್ತಿರುವರು. ಇವರ ಗುರುವಿನ ಮಾರ್ಗದರ್ಶನದಲ್ಲಿ ಕರ್ನಾಟಕ ಪರೀಕ್ಷಾ ಮಂಡಳಿ ನಡೆಸಿದ ಭರತನಾಟ್ಯ ಜೂನಿಯರ್ ಹಾಗೂ ಸೀನಿಯರ್ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಇವರು ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲಿಯವರು ನಡೆಸುವ ವಿಶಾರದ್ ಪ್ರಥಮ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದಿದ್ದಾರೆ . ತಮ್ಮ* **BFA(Bachelor of Fine arts)** *ಅನ್ನು ತಂಜಾವೂರಿನ ತಮಿಳು ವಿಶ್ವವಿದ್ಯಾಲಯದಲ್ಲಿ ಪ್ರಥಮ* ***ದರ್ಜೆ****ಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಶಾಸ್ತ್ರೀಯ ಸಂಗೀತವನ್ನು ಐದನೇ ವಯಸ್ಸಿನಿಂದ ಅಭ್ಯಾಸ ಮಾಡುತ್ತಿದ್ದು* ***KSEEB*** *ಮಂಡಳಿ ನಡೆಸಿದ ಜೂನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಚಿತ್ರಕಲೆಯಲ್ಲಿ ಕೂಡ ಆಸಕ್ತಿಯಿದ್ದು, ಡಾ. ದ್ವರಿತಾ ವಿಶ್ವನಾಥರವರು ಬರೆದ "ನಾಯಿಕಾಂತರಂಗ" ಪುಸ್ತಕಕ್ಕೆ ಚಿತ್ರಗಳನ್ನು ಬರೆದಿರುವರು.* ಪ್ರಸ್ತುತ ಇವರು ನೂಪುರಭ್ರಮರಿ ಸಂಸ್ಥೆಯ **'ನೃತ್ಯಶಿಲ್ಪಯಾತ್ರೆ' ಅಧ್ಯಯನ ತರಬೇತಿಯನ್ನು (ಇಂಟರ್ನ್ ಶಿಪ್) ಪಡೆಯುತ್ತಿದ್ದಾರೆ.**

COPYRIGHT PROTECT